

ತಲ್ಲೀನರಾಗಿದ್ದ ನೆನಪು. ಅವರು ಫೋಟೋಗಳಲ್ಲಿ ಕಾಣಿಸಿಕೊಂಡಿದ್ದೂ ಕಡಿಮೆ. ಆದರೆ ತೋಟದಲ್ಲಿ ನಾನು ಒಂಟಿಯಿರುವಾಗಲೆಲ್ಲ ನನ್ನೊಂದಿಗೆ ಅವರು ಹೇಳುತ್ತಿದ್ದುದು ಒಂದೇ ಮಾತು, 'ನೀವೆಲ್ಲ ನನ್ನ ಮಗನನ್ನು ಚನ್ನಾಗಿ ನೋಡಿಕೊಳ್ಳಬೇಕಪ್ಪೋ. ಅವನ ಇದ್ಯಾಭ್ಯಾಸಕ್ಕೆ ಎಲ್ಲ ಅನುಕೂಲ ಮಾಡಿಕೊಡಬೇಕಪ್ಪೋ... ಸ್ವಾನೆ ಖರ್ಚಾಗುತ್ತದಂತೆ ಪರವಾಗಿಲ್ಲ... ಒಟ್ಟಿನಲ್ಲಿ ಅವನು ಸಂದಾಕೆ ಓದಿ ದೊಡ್ಡ ಆಫೀಸರಾಗಬೇಕಪ್ಪೋ...' ಎಂದು. ಅದಾಗಲೇ ನಾನು ಶೈಕ್ಷಣಿಕವಾಗಿ ಮುಂದಿದ್ದೆ ಎಂದು ಹೆಸರಾಗಿತ್ತು, ಹಾಗಾಗಿ ಅವರ ಹಿಂದಿಂದೆ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಓಡಾಡುತ್ತಿದ್ದ ನಾನು ಅವರ ದೃಷ್ಟಿಯಲ್ಲಿ ಕೆಲವೇ ವರ್ಷಗಳಲ್ಲಿ ದೊಡ್ಡವನಾಗಿಬಿಟ್ಟಿದ್ದೆ!

ಇದೆಲ್ಲ ಈಗಿನ ಮಧುರ ಭಾವನೆ. ನಾನು ಅವರೊಂದಿಗೆ ವಾಸಿಸುವಾಗ ನಮಗೆ ಅವರ ಮೇಲೆ ಸ್ವಲ್ಪ ಬೇಸರ ಇತ್ತು. ಅವರಿಗೆ ಬೆಂಗಳೂರಿಂದ ಬರುವ ಅಕ್ಕನ ಬಳಗದ ಮೇಲೆ ಹೆಚ್ಚು ಅಕ್ಕರೆ. ಅವರ ದೇಖರೇಖೆ ಚೆನ್ನಾಗಿ ನಡೆಸುತ್ತಿದ್ದರು. ಬಿಸ್ಲೇರಿ ಬಾಟಲಿನಲ್ಲಿ ಎಳನೀರು ತುಂಬಿಸಿ ಕೊಡುತ್ತಿದ್ದರು. ಉಳಿದ ನಾಲ್ವರು ಅವರ ಮಕ್ಕಳ ಬಗ್ಗೆಯಿದ್ದ ಆಸ್ಥೆ ತುಸು ಕಡಿಮೆಯೆ. ಅದೆಲ್ಲ ಮಡದಿ ಮೇಲಿನ ಪ್ರೀತಿಯೆಂಬುದೂ ನಮಗೆ ಗೊತ್ತಾಗುತ್ತಿತ್ತು. ಆದರೂ ಅವರ ಅಂತಃಕರಣ ಕೆಲವೊಮ್ಮೆ ವಿಶಿಷ್ಟವಾಗಿ ತುಡಿಯುತ್ತಿತ್ತು. ಒಮ್ಮೆ ಏನಾಯಿತೆಂದರೆ... ನಾನು ಊರಿನ ಹುಡುಗರೊಂದಿಗೆ ಸೇರಿ ಹರಿಸೇವೆಯ ಆಟವಾಡುತ್ತಿದ್ದೆ. ಕಲ್ಲು ಮಣ್ಣುಗಳನ್ನು ಕಲಸಿ ಸಣ್ಣ ಮನೆ ಕಟ್ಟುವುದು, ತೆಂಗಿನ ಪೀಸೆಯಿಂದ ಮಾಳಿಗೆ ಕಟ್ಟುವುದು. ಅದರೊಳಗೆ ಮೂರು ಕಲ್ಲುಗಳನ್ನು ದೇವರಂತೆ ಕೂರಿಸುವುದು. ಪುಟ್ಟ ಒಲೆ ಜೋಡಿಸಿ ಕುಂಬಾರರ ಗಾವುಸಿಯಿಂದ ಒಡೆದ ಕುಡಿಕೆ ತಂದು ಹಿಡಿ ಅಕ್ಕಿ ಸುರಿದು ಅನ್ನ ಬೇಯಿಸಿ, ತೋಟದೊಳಗಿನ ಟಮಾಟ, ಬದನೇಕಾಯಿ, ಮೆಣಸಿನಕಾಯಿ ಕಿತ್ತು ಕೆಂಡದಲ್ಲಿ ಸುಟ್ಟು ಕಿವುಚಿ ಸಾರು ಮಾಡಿ ಮುತ್ತುಗದೆಲೆ ಮುಂದೆ ಎಲ್ಲರನ್ನೂ ಕೂರಿಸಿ ಒಂದೊಂದೇ ತುತ್ತು ಅನ್ನ ಬಡಿಸಿ ಆಡುವ 'ಹರಿಸೇವೆ' ಆಟವದು. ಪೂಜೆಯ ಹೊತ್ತಿಗೆ ಶಿವ ಎಂಬುವವನು (ಅವನು ಈಗಿಲ್ಲ, ಈಜಾಡಲು ಹೋಗಿ ನೀರುಪಾಲಾದ) 'ದೇವರಿಗೆ ಎಡೆಯಿಡಬೇಕಲ್ಲ' ಎಂಬ ಸಮಸ್ಯೆಯನ್ನು ಎದುರಿಟ್ಟನು. ಎಲ್ಲರಿಗೂ ಹೌದೆನಿಸಿತು. ಎಡೆಯೆಂದರೆ ಮಾಮೂಲಿ ಅನ್ನ ಸಾರು ಆಗದು, ವಿಶೇಷ ತಿಂಡಿಯಾಗಿರಬೇಕು. ಅಂಗಡಿಯಿಂದ ತಿನಿಸು ತಂದು ಎಡೆಯಿಡುವುದು ಎಂದು ನಿಶ್ಚಯವಾಯಿತು. ಸರಿ ಅದಕ್ಕೆ ದುಡ್ಡು? ಎಲ್ಲರ ಚಿತ್ತ ನನ್ನತ್ತ. 'ಹೋಗಿ ನಿಮ್ಮ ತಾತನ ಜೇಬಿಂದ ನಾಕಾಣೆ ತಾ' ಎಂದು ಐಡಿಯಾ ಕೊಟ್ಟರು. ನಾನು ಅದೂ ಇದೂ ಯೋಚಿಸಿ ದೇವರಿಗಲ್ಲವೇ ರಕ್ಷಿಸುತ್ತಾನೆಂದು ಬಗೆದು ಓಡಿಹೋಗಿ ತಾತನ ಕೋಟಿನಿಂದ ನಾಕಾಣೆ ತಂದುಕೊಟ್ಟೆ. ಹರಿಸೇವೆ ಸಾಂಗವಾಗಿ ಜರುಗಿತು. ಎಡೆಯೂ ಎಲ್ಲರ ನಾಲಿಗೆ ಸವರಿತು. ಸಂಜೆ ಮನೆಯಲ್ಲಿ ತಾತ 'ನನ್ನ ನಾಕಾಣೆ ಎಲ್ಲಿಗೋಯಿತು' ಎಂದು ಗದರಿಕೊಂಡರು.

ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಿನ ಸಂಸಾರವದು. ನಾಕಾಣೆಯಲ್ಲ, ನಾಕು ಪೈಸೆಯೂ ಲೆಕ್ಕಕ್ಕೆ ಸಿಗುತ್ತಿತ್ತು. ಯಾರೂ ಯಾವುದಕ್ಕೂ ಬಳಸಿಲ್ಲವೆಂದಾದರೆ ಎಲ್ಲಿ ಹೋಯಿತು? ಅಕ್ಕ ಬರಲು ತಗೊಂಡು ಬಂದರು. ನನಗೆ ತೊಡೆ ನಡುಗಲಾರಂಭಿಸಿದವು. ಮನೆತುಂಬ ಅಟ್ಟಾಡಿಸಿಕೊಂಡು ಬಿಗಿಯಲಾರಂಭಿಸಿದರು. ಸಾಮಾನ್ಯವಾಗಿ ನನ್ನ ಪರ ವಹಿಸುತ್ತಿದ್ದ ಅಜ್ಜಿ (ಮೊಮ್ಮಗನೆಂಬ ಪ್ರೀತಿಯೂ ಸೊಸೆ ಮೇಲಿನ...) ಅವತ್ತು ಸುಮ್ಮನಿದ್ದರು, ಕಳ್ಳತನದ ಪರ ವಹಿಸುವುದೆಂತ? ಏನಾದರೂ ವಹಿಸಿದ ಕೆಲಸ ಸರಿ ಮಾಡಿಲ್ಲದಾಗ, ತಾತ್ಸಾರದಿಂದ ಅಡ್ಡಾದಿಡ್ಡಿ ಮಾಡಿದ್ದಾಗ ಆಗಾಗ್ಗೆ ನನಗೆ ಪೂಜೆಯಾಗುತ್ತಿದ್ದುದುಂಟು. ಅವತ್ತು ಹಿತ್ತಲಿನ ಕಾಂಪೋಂಡಿನ ತನಕ ಓಡಿದ್ದೆ. ಅಲ್ಲಿಗೂ ಬಿಡದೆ ಬಂದಿದ್ದರು ಅಕ್ಕ. ಅದೆಲ್ಲಿದ್ದರೋ ಮಾಮ ಆಗ ತಾನೆ ದನ ಹೊಡೆದುಕೊಂಡು ಹಿತ್ತಲಿನ ಗೇಟು ತೆಗೆದು ಪ್ರತ್ಯಕ್ಷರಾದರು. ನನ್ನ ಜೀವ ಮರಳಿತು. ಓಡಿ ಹೋಗಿ ಅವರ ತೊಡೆ ಸಂದಿಯಲ್ಲಿ ಹುದುಗಿದೆ. ಮಾಮ, 'ಸುಮ್ಮಿರಣೆ, ಸಣ್ಣುಡುಗನ್ನ ಯಾಕೆ ಹಂಗೆ ಬಡಿತಿ' ಎಂದು ಬಿಡಿಸಿದರು. ಇದು ಆಗಾಗ್ಗೆ ಪುನರಾವರ್ತನೆ ಆಗುತ್ತಿದ್ದಂತಹ ಘಟನೆ. ಅಕ್ಕ ತನ್ನ ದುರ್ದೈವದ ಸಿಟ್ಟನ್ನೆಲ್ಲ ನಮ್ಮ ಮೇಲೆ ತೀರಿಸಿಕೊಳ್ಳುತ್ತಿದ್ದರು ಅನಿಸುತ್ತದೆ. ಸರಿಯಾಗಿ ಬಾರಿಸುತ್ತಿದ್ದರು. ಆಗೆಲ್ಲ ನನ್ನ ಕಣ್ಣುಗಳು ಮಾಮನನ್ನೇ ಹುಡುಕುತ್ತಿದ್ದವು. ಆ ದಿನ ಹಿತ್ತಲಿನ ಕಾಂಪೋಂಡಿನ ತನಕ ಓಡಿದ್ದೂ ಅದೇ ಕಾರಣಕ್ಕೆ. ನನ್ನ ಅದೃಷ್ಟ ಚೆನ್ನಾಗಿದ್ದರೆ ಮಾಮ ಪ್ರತ್ಯಕ್ಷರಾಗುತ್ತಿದ್ದರು, ಇಲ್ಲಾಂದರೆ ಇಲ್ಲ. ಪ್ರತ್ಯಕ್ಷರಾದಾಗೆಲ್ಲ ನಾನು ಅವರ ಮಡಿಲಲ್ಲಿ ಹುದುಗುವುದು, ಅವರು ಅಕ್ಕನ ಕೈಲಿಂದ ಬರಲು ಕಿತ್ತುಕೊಳ್ಳುವುದು. ನಂತರ ತೋಟಕ್ಕೆ ಕರೆದೊಯ್ದು ಎಳನೀರು ಕುಡಿಸಿ ಸಮಾಧಾನ ಪಡಿಸುವುದು. ನನ್ನ ಜೀವಮಾನದಲ್ಲೇ ಕಳ್ಳತನವೆಂದೇನಾದರೂ ಮಾಡಿದ್ದರೆ ಆ ನಾಕಾಣೆ. ಅದೇ ಮೊದಲು, ಅದೇ ಕೊನೆ. ಇಂದಿಗೂ ಬಿಡದೆ ನನ್ನನ್ನು ಹಿಂಸಿಸುತ್ತಿದೆ ಅದು.

ಮಾಮನ ಮಮತೆ ತುಡಿಯುತ್ತಿದ್ದುದು ಹೀಗೆ. ಇದಕ್ಕಿಂತ ದೊಡ್ಡ ಉಡುಗೊರೆ ಯಾರಿಗಾದರೂ ಸಿಗುವುದುಂಟೇ?

ನಾನು ವಿಧ್ಯಾಭ್ಯಾಸದ ಸಲುವಾಗಿ ಹೊರಗೆ ಬಂದನೋ ಆಮೇಲೆ ಅತ್ತ ಹೋಗುವುದು ಕಡಿಮೆಯಾಯಿತು. ರಜಾ ದಿನಗಳಲ್ಲಿ ಒಂದು ಸುತ್ತು ಎಲ್ಲ ಊರುಗಳನ್ನು ಸುತ್ತಿ ಎಲ್ಲ ಬಂಧುಗಳನ್ನು ಮಾತನಾಡಿಸಿ ಬರುವುದು ವಾಡಿಕೆಯಾಯಿತು. ತಾತನಿಗೆ ಅಜ್ಜಿಗೆ ವಯಸ್ಸಾಗಿ ಮೂಲೆ ಹಿಡಿದರು. ಒಂದು ಮಟ್ಟಿಗೆ ಮಾಮನಿಗೂ ವಯಸ್ಸಾಗಿತ್ತು. ರಾಜನಿಗೂ ಕೂಡ! ಒಮ್ಮೆ ಊರಿಗೆ ಹೋದಾಗ ಮಾಮ 'ಯಾಕೋ ಕೈ ಸ್ವಾಧೀನ ಬತ್ತಿಲ್ಲ ಅಪಯ' ಎಂದು ನೋವು ತೋಡಿಕೊಂಡರು. ಕೈಯಾಡುತ್ತಿತ್ತು, ಅದರಿಂದ ಏನನ್ನೂ ಎತ್ತಲು ಇಳಿಸಲು ಬರುತ್ತಿರಲಿಲ್ಲ. ಅದಾದ ಮುಂದಿನ ವರ್ಷಕ್ಕೆ ಆ ಕೈ ಸಂಪೂರ್ಣ ನಿಷ್ಕ್ರಿಯವಾಗಿತ್ತು. ತನ್ನದಲ್ಲದ ವಸ್ತು ದೇಹಕ್ಕೆ ಜೋತುಬಿದ್ದಂತೆ ತೋರುತ್ತಿತ್ತು. ಇನ್ನೊಂದು ವರ್ಷಕ್ಕೆ ಇನ್ನೊಂದು ಕೈ ಬಿತ್ತು. ಇನ್ನೆರಡು ವರ್ಷಕ್ಕೆ ಮಾತೇ ಬಿದ್ದೋಯ್ತು. ಪ್ರತಿ ವಾರ್ಷಿಕ ರಜೆಗೆ ಹೋದಾಗಲೆಲ್ಲ ಒಂದೊಂದು ಹಂತ. ಗೆದ್ದಲು ಹಿಡಿದ ಮರ ಹಂತಹಂತವಾಗಿ ಕುಸಿದಂತೆ. ಆಮೇಲೆ ಸಂಪೂರ್ಣ ಹಾಸಿಗೆ ಹಿಡಿದರು. ಮಲಗಿದಲ್ಲಿಂದ ಏಳಲಾಗದೆ ಬೆನ್ನಿನಲ್ಲಿ ಕುರ ಎದ್ದವು. ಹಾಸಿಗೆ ಮೇಲೆಯೆ ಹೇಲುಚ್ಚೆಯೆಲ್ಲ. ಅಕ್ಕ ಸತತ ಹತ್ತು ವರುಷ ಮೊದಲು ತಾತನ, ಆಮೇಲೆ ಗಂಡನ ಹೇಲುಚ್ಚೆ ಬಾಚಿಹಾಕುತ್ತ ಕಳೆದರು.

ಎರಡೆರಡು ವರುಷಗಳ ಅಂತರದಲ್ಲಿ ತಾತ ಹೋದರು, ಅಜ್ಜಿ ಹೋದರು, ಮಾಮನೂ ಹೋದರು. ಇವರ ನಡುವೆ ರಾಜ ಯಾವಾಗ ಹೋದನೆಂದು ನೆನಪಾಗುತ್ತಿಲ್ಲ. ಅವನಂತೂ ತೀರ ಮುದುಕನಾಗಿದ್ದ. ನಾಯಿಗಳು ತಮ್ಮ ಸಾವು ಹತ್ತಿರವಾಗುತ್ತಿದ್ದಂತೆ ಒಡೆಯನನ್ನು ತೊರೆದು ಏಕಾಂತ ಹೊರಟುಬಿಡುತ್ತಾವಂತೆ. ಪ್ರಾಣಿಗಳಿಗೂ ಸನ್ಯಾಸಾಶ್ರಮ ಎಂಬುದಿದೆಯಲ್ಲ. ಅಥವಾ ಅವುಗಳಿಂದಲೇ ನಾವು ಕಲಿತಿದ್ದೆ? ರಾಜ ಮೂಲೆ ಬಿದ್ದವನು ಒಂದಿನ ಇದ್ದಕ್ಕಿದ್ದಂತೆ ಎದ್ದು ಹೋದನಂತೆ. ಎತ್ತ ಹೋಗಿ ಪ್ರಾಣ ತ್ಯಜಿಸಿದನೆಂದು ಹುಡುಕಿದರಂತೆ. ಕಳೇಬರವೂ ಸಿಕ್ಕಲಿಲ್ಲವಂತೆ. ಅಲ್ಲಿಗಾಗಲೆ ಅಕ್ಕ ಮಗನನ್ನು ವಿದ್ಯಾಭ್ಯಾಸಕ್ಕೆಂದು ಬೆಂಗಳೂರು ಸೇರಿಸಿದ್ದರು. ಏಕಾಏಕಿ ಮನೆ ಬಿಕೋ ಅನ್ನಲಾರಂಭಿಸಿತು! ಅಷ್ಟು ದೊಡ್ಡ ತುಂಬಿ ತುಳುಕುತಿದ್ದ ಮನೆಯಲ್ಲಿ ಅಕ್ಕ ಒಬ್ಬರೇ! ಬಂದುಹೋಗುತ್ತಿದ್ದ ಮೊಮ್ಮಕ್ಕಳೆಲ್ಲ ಉದ್ಯೋಗ, ಮದುವೆ, ಮಕ್ಕಳಲ್ಲಿ ನಿರತರಾಗಿ ಹೆಣ್ಮಕ್ಕಳು ಅವರೂ ಮುದುಕಿಯರಾಗಿ, ಮನೆಗೆ ಬರುವವರೂ ವಿರಳವಾಗಿ, ಆಕೆ ಅದೆಷ್ಟು ಒಂಟಿತನ ಅನುಭವಿಸಿರಬೇಡ! 'ನೀವಾದ್ರೂ ಅವಗವಾಗ ಬಂದು ಹೋಗ್ರೋ' ಎನ್ನುತ್ತಿದ್ದರು.

ಮಾಮ ಬದುಕಿನುದ್ದಕ್ಕೂ ಬೈಗುಳ, ಹೊಡೆತ ನಿಂದನೆಯಲ್ಲೇ ಕಳೆದರೆಂದು ಅನಿಸುತ್ತದೆ. ಹೊಡೆತ ಬಿಟ್ಟು ಮಿಕ್ಕಾವುದೂ ಅವರಿಗೆ ತಟ್ಟರಲಿಕ್ಕಿಲ್ಲ ಎಂದು ಒಮ್ಮೊಮ್ಮೆ ಅನಿಸಿದರೂ ನಮಗೇನು ಗೊತ್ತು ಅವರ ಅಂತರಂಗ? ಏನನ್ನೂ ವ್ಯಕ್ತಪಡಿಸದ ಜೀವವದು. ಬಹುಶಃ ಅವರು ಈ ಕಾಲದಲ್ಲಿ ಜನಿಸಿದ್ದರೆ ಅವರ ಬದುಕು ತುಸು ಉತ್ತಮವಾಗಿರುತ್ತಿತ್ತೇನೋ? ಏನು ಮಾಡುವುದು, ನಾವೆಲ್ಲ ಆಯಾ ಕಾಲದ ಹೊರೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಭೂಮಿಗೆ ಇಳಿದವರಲ್ಲವೇ?

ಈಗೀಗ ಯಾರಾದರೂ ಮಾಮ ಎಂದರೆ ಕಸಿವಿಸಿಯಾಗುತ್ತದೆ. ಎಲ್ಲ ಉದ್ಯೋಗಗಳಿಗೂ ಒಂದು ಘನತೆ ಅಂತ ಇರುತ್ತದೆ. ಸ್ವಂತ ಮಾಮ ಇರಲಿ ಬಿಡಲಿ, ನಾವು ಯಾರೂ ವೃತ್ತಿ ಘನತೆಗೆ ಧಕ್ಕೆ ಉಂಟು ಮಾಡಬಾರದು. ನಮ್ಮ ದೇಶದಲ್ಲಿ ಇದು ದೊಡ್ಡ ಸಮಸ್ಯೆ. ಬೀದಿ ಕಸ ಗುಡಿಸುವ ಬಿಬಿಎಂಪಿ ಕಾರ್ಮಿಕರನ್ನೂ 'ಸರ್, ಮೇಡಂ, ನೀವು, ತಾವು' ಎಂದೇ ಸಂಬೋಧಿಸಬೇಕು, ಆ ಮಟ್ಟಿಗೆ ನಾವು ಬೌದ್ಧಿಕವಾಗಿ ಬೆಳೆಯಬೇಕು. ಕಾರ್ಮಿಕರನ್ನು 'ಹೋಗೋ ಬಾರೋ' ಎನ್ನುತ್ತ ಪೋಲೀಸರು ಎದುರಾದ ತಕ್ಷಣ 'ಸರ್' ಎಂದು ಕೈಕಟ್ಟುವುದು ನಾವೆಷ್ಟು ಕುಬ್ಜರು ಎಂದು ತೋರಿಸುತ್ತದೆ.